ಕರ್ನಾಟಕ ವಿಧಾನ ಸಭೆ

ಬೆಳಗಾವಿ ಅಧಿವೇಶನ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಶುಕ್ರವಾರ ದಿನಾಂಕ 23 ನೇ ಜನವರಿ 2009 ರಂದು

ಸದನವು ಬೆಳಗಾವಿಯ ಡಾ॥ ಬಿ.ಎಸ್.ಜೀರಿಗೆ ಹಾಲ್, ಜೆನ್ಎಂಸಿ ಮೆಮೋರಿಯಲ್ ಆಡಿಟೋರಿಯಮ್‌ನಲ್ಲಿ ಬೆಳಗಾವಿನಲ್ಲಿ ಬೆಳಿಗ್ಗೆ 10:45 ಗಂಟೆಗೆ ಸಮಾವೇಶಗೊಂಡಿತು.

(ಸದನವು ಬೆಳಿಗ್ಗೆ 10:45 ಗಂಟೆಗೆ ಸಮಾವೇಶಗೊಂಡಿತು.

ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ :- ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆ ಪರವಾನಗಿ ನೀಡಿರುವ ಬಗ್ಗೆ ಚರ್ಚಿಸಲು ಅವಕಾಶ ನೀಡುವ ಬಗ್ಗೆ :

(ಕಾಂಗ್ರೇಸ್ ಮತ್ತು ಜಾತ್ಯಾತೀತ ಜನತಾದಳ ಸದಸ್ಯರುಗಳು ಬಾವಿಯಲ್ಲಿ ಧರಣಿ ಹೂಡಿದ್ದರು)

ಅಧ್ಯಕ್ಷರು :- ವಿರೋಧ ಪಕ್ಷದ ಮತ್ತು ಉಳಿದ ಶಾಸಕ ಮಿತ್ರರಲ್ಲಿ ವಿನಂತಿ ಏನೆಂದರೆ ದಯಮಾಡಿ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ. ಇಲ್ಲಿ ಚರ್ಚೆ ಮಾಡುವ ವಿಚಾರ ಬಹಳ ಇದೆ. ಬಹಳ ಮಹತ್ವದ ವಿಚಾರಗಳು ಚರ್ಚೆ ಮಾಡಬೇಕಾಗಿದೆ. ಅದಲ್ಲದೆ ನಿಯಮ 69ರ ಅಡಿಯಲ್ಲಿ ನೀರಾವರಿ ಯೋಜನೆಗಳ ಬಗ್ಗೆ, ಪಿ.ಡಬ್ಲ್ಯೂಡಿ ಇಲಾಖೆಯ ಬಗ್ಗೆ ಚರ್ಚೆ ಮಾಡತಕ್ಕದ್ದು ಇದೆ. ಅಷ್ಟಲ್ಲದೇ ಗಮನ ಸೆಳೆಯುವ ಸೂಚನೆಯ ಮೂಲಕ ಸಾಕಷ್ಟು ವಿಚಾರಗಳೂ ಇದೆ. ಅದರಲ್ಲೂ ಬೆಳಗಾವಿಯಲ್ಲಿ ವಿಶೇಷ ಅಧಿವೇಶನ ಕರೆದಿರುವುದರಿಂದ ಈ ಭಾಗದ ವಿಚಾರಗಳು ಸಾಕಷ್ಟು ಚರ್ಚೆ ಮಾಡುವ ಅಗತ್ಯವಿದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ನಿಮ್ಮಲ್ಲಿ ವಿನಂತಿ ಮಾಡುವುದೇನೆಂದರೆ ತಾವುಗಳು ನಿಮ್ಮ ಸ್ಥಾನಗಳಿಗೆ ದಯಮಾಡಿ ಹೋಗಿ ಉಳಿದಿರುವ ವಿಚಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು.

(ಈ ಹಂತದಲ್ಲಿ ಬಾವಿಯಲ್ಲಿ ಕುಳಿತು ಧರಣಿ ಮಾಡುತ್ತಿದ್ದ ಸದಸ್ಯರುಗಳು ಕೂಗುತ್ತಿದ್ದರು)

ಅಧ್ಯಕ್ಷರು :- ಬಾವಿಯಲ್ಲಿದ್ದು ಏನೇ ಮಾತನಾಡಿದರೂ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಇದು ಪ್ರಜಾಪ್ರಭುತ್ವ ವ್ಯವಸ್ಥೆ ಇದರಲ್ಲಿ..

ಶ್ರೀ ದೊಡ್ಡನಗೌಡ ಈಶ್ವರಗೌಡ ಚಿಕ್ಕನಗೌಡ :- ವಿರೋಧ ಪಕ್ಷದ ವರಿಗೆ ಧಿಕ್ಕಾರ.

(ಗೊಂದಲ)

ಅಧ್ಯಕ್ಷರು :- ಚಿಕ್ಕನಗೌಡರೆ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ತಾವು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ನನ್ನದೊಂದು ಸಲಹೆ ಇದೆ. ತಾವು ತಮ್ಮ ಕೊಠಡಿಗೆ ಮಾನ್ಯ ಮುಖ್ಯಮಂತ್ರಿಯವರನ್ನು ಕರೆಯಿರಿ ನಾವೂ ಅಲ್ಲಿಗೆ ಬರುತ್ತೇವೆ, ಇದರ ಬಗ್ಗೆ ಮಾತನಾಡೋಣ, ಅವರು ನಮ್ಮನ್ನು ಕನ್‌ವಿನ್ಸ್ ಮಾಡಿದರೆ ಅಥವಾ ತಮ್ಮದೇ ಸರಿಯೆಂದು ಇದ್ದರೆ ಮುಂದೆ ಏನು ಮಾಡಬೇಕು ಎಂಬ ಬಗ್ಗೆ ನಾವು ತೀರ್ಮಾನ ತೆಗೆದು ಕೊಳ್ಳುತ್ತೇವೆ. ಏಕೆಂದರೆ ಇಲ್ಲಿ ಕಾಲಹರಣ ಮಾಡುವ ಉದ್ದೇಶ ನಮಗಿಲ್ಲ. ಇಲ್ಲಿ ಒಳ್ಳೆಯ ಚರ್ಚೆಯಾಗಬೇಕು ಎಂಬ ದೃಷ್ಟಿಯಿಂದ ನಾವೆಲ್ಲರೂ ಇಲ್ಲಿಗೆ ಬಂದಿದ್ದೇವೆ. ನಿನ್ನೆ ತಾವು ಹೇಳಿದಂತೆ ತಮಗೆ ಸಹಕಾರ ಕೊಟ್ಟು 6 ಗಂಟೆಯವರೆಗೆ ಚರ್ಚೆ ಮಾಡಿ ಸುಮಾರು 5 ಬಿಲ್ಲುಗಳನ್ನು ಪಾಸ್ ಮಾಡಿಕೊಟ್ಟಿದ್ದೇವೆ. ಆಗ ಯಾವುದೇ ಕಾಲಹರಣವಾಗಿಲ್ಲ. ಆದರೆ ಮುಖ್ಯಮಂತ್ರಿಯವರಿಗೆ ಸಿಟ್ಟು ಇದೆಯೋ ಗೊತ್ತಿಲ್ಲ. ನಾವು 6 ಗಂಟೆ ಚರ್ಚೆ ಮಾಡಿ ಬಿಲ್ಲುಗಳನ್ನು ಪಾಸ್‌ಮಾಡಿಕೊಟ್ಟಿದ್ದರು ಏನೂ ಆಗಿಲ್ಲ, ಕೇವಲ ಗಣಿಗಾರಿಕೆ ಬಗ್ಗೆ ಮಾತ್ರ ಆಗಿದೆಯೆಂದು ಹೇಳಿದ್ದಾರೆ. ಕೇವಲ Reddy Brothers Vs. Gowda Brothers ಎಂದು ಹೇಳಿ ಸುಮ್ಮನೆ time waste ಮಾಡುವುದು ಬೇಡ. ಆದರೆ ನೀವು ಎಲ್ಲದಕ್ಕು ಒಂದೇ ಔಷಧಿಯೆಂದರೆ ಸರಿಯಾಗುವುದಿಲ್ಲ. ಆದ್ದರಿಂದ ಅವರನ್ನು ತಮ್ಮ ಕೊಠಡಿಗೆ ಕರೆಸಿ ನಾವೂ ಬರುತ್ತೇವೆ, ಕುಮಾರಸ್ವಾಮಿಯವರು ಬರುತ್ತಾರೆ, ಎಲ್ಲರು ಕೂಡಿ ಮಾತನಾಡೋಣ. ಅನಂತರ ಮುಂದೆ ಏನು ಕಾರ್ಯಕ್ರಮ ಮಾಡಬೇಕೋ ಅದನ್ನು

ಮಾಡೋಣ. ಸುಮ್ಮನೆ ಸಮಯ ನಷ್ಟವಾಗುತ್ತದೆ. ಇಲ್ಲದಿದ್ದರೆ ನಮ್ಮ ದಾರಿ ನಮಗೆ ಅವರ ದಾರಿ ಅವರಿಗೆ.

ಡಾ॥ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಅದು ನಿಮ್ಮ ಅಧಿಕಾರ. ನಿಮ್ಮದು ಪರಮೋಚ್ಚ ಅಧಿಕಾರ. ವಿರೋಧ ಪಕ್ಷದ ನಾಯಕರನ್ನು ಮನವೊಲಿಸಲು ನಾವು ಯಾವಾಗಲು ಸಿದ್ಧರಾಗಿದ್ದೇವೆ. ಆದರೆ, ಅವರು ಹಠ ಹಿಡಿಯಬಾರದಷ್ಟೆ!

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :- ಯಡಿಯೂರಪ್ಪನವರಿಗೆ ನಮ್ಮ ಮೇಲೆ ಪ್ರೀತಿ ಇದೆ ಆದರೆ ಪುರುಸೊತ್ತಿಲ್ಲ!

ಡಾ॥ ಬಿ.ಎಸ್.ಯಡಿಯೂರಪ್ಪ :- ನಿನ್ನೆ ಒಂದು ಸೈಡ್ ಮಾತ್ರ ಚರ್ಚೆಯಾಗಿದೆ. 2-3 ಪರಿವರ್ತನೆ ಮಾಡಿಕೊಂಡು ಒಂದು.., ಜಂಟಿ ಸದನದ ಸಮಿತಿ ಮಾಡೋಣ. ಇದುವರೆಗೆ ಗಣಿಗಾರಿಕೆಗೆ ಪರವಾನಗಿಕೊಟ್ಟಿರುವ 109 ಪ್ರಕರಣಗಳ ಬಗ್ಗೆ ಬೆಳಕಿಗೆ ಬರಲಿ. ಗಣಿ ಪರವಾನಗಿಗೆ ಹತ್ತಾರು ಜನರು ಅರ್ಜಿ ಹಾಕಿದ್ದರು ಬೇಕುಬೇಕಾದವರಿಗೆ ಮಾತ್ರ ಕೊಟ್ಟಿದ್ದಾರೆಂಬ ದೂರು ಇದೆ. ಆದ್ದರಿಂದ ಜೆ.ಎಸ್.ಸಿ. ಯನ್ನು ಮಾಡಿದರೆ ಇದರಲ್ಲಿ ಯಾರ್ಯಾರು ಬಂಧುಬಳಗದವರಿದ್ದಾರೆ, ಶಾಸಕರು, ಲೋಕಸಭಾ ಸದಸ್ಯರುಗಳು ಇದ್ದಾರೆ ಎಂಬ ಬಗ್ಗೆ ದೆಹಲಿಯಿಂದ ಶಿವಮೊಗ್ಗ ದವರೆಗೆ ಯಾರ್ಯಾರಿಗೆ ಕೊಟ್ಟಿದ್ದಾರೆ ಎಂಬುದು ರಾಜ್ಯದ ಜನತೆಗೆ ಗೊತ್ತಾಗುತ್ತದೆ.

ಎರಡನೆಯದು, ಅವಧಿ ಮೀರಿದ ಮೇಲೆ ಅಧಿಕಾರ ಇಲ್ಲದಿದ್ದರೂ ಕೊಟ್ಟಿರುವ ಬಗ್ಗೆ ಸಹ ವಿಚಾರಣೆ ಮಾಡಬೇಕು. ಇಲ್ಲದಿದ್ದರೆ ಹೈಕೋರ್ಟ್‌ನ sitting Judge ರವರಿಂದ ಈ 109 ಗಣಿಗಾರಿಕೆಯ ಪರವಾನಗಿ ನೀಡಿರುವ ಬಗ್ಗೆ ತನಿಖೆ ಮಾಡಿಸೋಣ. ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪಿಕೊಳ್ಳುವುದಾದರೆ ಇದನ್ನು ಮಾಡುತ್ತೇವೆ.

ಮೂರನೆಯದಾಗಿ, ಈ ಅಧಿವೇಶನ ಪೂರ್ಣವಾದ ಮೇಲೆ ನಾವು ನೀವೆಲ್ಲರೂ ದೆಹಲಿಗೆ ಹೋಗಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ಗಡಿಭಾಗದಲ್ಲೇನು ಒತ್ತುವರಿ ಮಾಡಿದ್ದಾರೆಂದು ಹೇಳಿದ್ದೀರಿ ಅದರ ಬಗ್ಗೆ ಕೇಂದ್ರದಿಂದ ಜಂಟಿ ಸರ್ವೆಯನ್ನು ಮಾಡಿಸೋಣ. ಸಿ.ಬಿ.ಐ. ಗೆ ಏಕೆ ವಹಿಸುವುದಿಲ್ಲವೆಂದರೆ, ಇದೇ ವಿಚಾರವನ್ನು ಈಗಾಗಲೇ ಸುಪ್ರಿಂಕೋರ್ಟ್ ನ್ಯಾಯಾಧೀಶರಾಗಿದ್ದ ಲೋಕಯುಕ್ತದಿಂದ ತನಿಖೆ ಮಾಡುವುದಕ್ಕೆ ಕೊಟ್ಟಮೇಲೆ ಒಂದೇ ವಿಚಾರದಲ್ಲಿ ಎರಡು

ಸಲ ತನಿಖೆ ಮಾಡುವುದಕ್ಕೆ ಕೊಡಲು ಆಗುತ್ತದೆಯೇ? ಆದ್ದರಿಂದ ತಾವು ಹೇಳಿದಂತೆ ತಮ್ಮ ಕೊಠಡಿಗೆ ಹೋಗಿ ಅವರ ಭಾವನೆ ಏನಿದೆಯೆಂದು ಕೇಳೋಣ. ಅಲ್ಲಿ ವ್ಯಾಪಕವಾಗಿ ಚರ್ಚೆ ಮಾಡಿ ಪರಿಹಾರವನ್ನು ಕಂಡುಹಿಡಿಯೋಣ. ತಮ್ಮ ಕೊಠಡಿಗೆ ನಾವೂ ಬರುತ್ತೇವೆ. ಅಲ್ಲಿ ಮಾತನಾಡೋಣ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ :- ಅವರು ಕೊಟ್ಟಿರುವ ಮೂರು ಸಲಹೆಗಳು ಅವರಿಗೆ ಉಪಯೋಗವಾಗುವಂಥದ್ದು. ಅದರಿಂದ ಈ ರಾಜ್ಯಕ್ಕೆ, ಜನತೆಗೆ ಮತ್ತು ಬೊಕ್ಕಸಕ್ಕೆ ಸಹಾಯವಾಗುವುದಿಲ್ಲ. 109 ಕೇಸುಗಳಲ್ಲಿ ನಿಮ್ಮ ಕಾಲದಲ್ಲೇ ಅನುಮತಿ ಕೊಟ್ಟಿರುವುದು. ಅದರ ಬಗ್ಗೆ ವಿಚಾರಣೆ ಮಾಡಿಸಿ ಎಂದರೆ ಜಂಟಿ ಸರ್ವೆ ಮಾಡಿಸಲು ದೆಹಲಿಗೆ ಹೋಗೋಣ ಎಂದರೆ ಹೇಗೆ? ಇದರಲ್ಲಿ ತಮ್ಮ ಮಂತ್ರಿಗಳೇ ಶಾಮೀಲಾಗಿರುವುದರಿಂದ, ಅಕ್ರಮ ಗಣಿಗಾರಿಕೆಯಲ್ಲಿ ಗಡಿಭಾಗವನ್ನು ಈಗಾಗಲೆ ಒತ್ತುವರಿ ಮಾಡಿದ್ದಾರೆ. 32 ಕಿಲೋಮೀಟರ್ ಉದ್ದ ಒಂದು ಮೀಟರ್ ಅಗಲ ಗಡಿಭಾಗವನ್ನು ಒತ್ತುವರಿ ಮಾಡಿದ್ದಾರೆ. ಆದ್ದರಿಂದ ಇದಕ್ಕೆ ನ್ಯಾಯ ದೊರೆಯಬೇಕಾದರೆ ಸಿ.ಬಿ.ಐ. ಗೆ ತನಿಖೆಗೆ ವಹಿಸಬೇಕೆಂದು ನಾವು ಹೇಳುತ್ತಿದ್ದೇವೆ. ನಾವು ನಮ್ಮ ಬೇಡಿಕೆಯನ್ನು ಇಟ್ಟಿದ್ದೇವೆ. ಅವರು ಜೆ.ಎಸ್.ಸಿ. ಯನ್ನು ಯಾವ ರೀತಿಯಾಗಿ ಮಾಡುತ್ತಾರೆ? ಅವರಿಗೆ ಏನು ಅಧಿಕಾರವಿದೆ? ಅವರಿಗೆ investigate ಮಾಡತಕ್ಕ ಅಧಿಕಾರ ಇದೆಯೇ? ವಿಚಾರಣೆ ಮಾಡತಕ್ಕ ಅಧಿಕಾರ ಅವರಿಗೆ ಇದೆಯೋ? ಏನೂ ಇಲ್ಲ.

ಡಾ॥ ಬಿ.ಎಸ್. ಯಡಿಯೂರಪ್ಪ :- ಇದನ್ನು sitting High Court Judgeರವರಿಗೆ ವಹಿಸೋಣ. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಜಂಟಿ ಸರ್ವೆ ಮಾಡುವಂತೆ ವಿನಂತಿಸೋಣ. ನಮ್ಮ ಮೇಲೆ ನಂಬಿಕೆ ಇಲ್ಲ. ಇಲ್ಲಿರುವ ಫಲಾನುಭವಿಗಳೆಲ್ಲರೂ ಅವರೇ. ನಮ್ಮವರು ಯಾರೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ:- ಸುಪ್ರಿಂಕೋರ್ಟ್ ನ್ಯಾಯಾಧೀಶರೆ ಲೋಕಾಯುಕ್ತದ ವರದಿಯನ್ನು ಕೊಟ್ಟಿದ್ದಾರೆ. ಅವರೇನು ordinary ಮನುಷ್ಯರಲ್ಲ. ನಾವೇ ಅದರಲ್ಲಿ ಸಿಕ್ಕಿಬಿದ್ದರೆ ಸಿ.ಬಿ.ಐ. ಗೆ ವಹಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಗಣಿಗಾರಿಕೆಗೆ ಸಂಬಂಧಪಟ್ಟಂತೆ ಲೋಕಾಯುಕ್ತದವರ ವರದಿಯ ಬಗ್ಗೆ ಕಳೆದ ಮೂರು ದಿವಸಗಳಿಂದ ಚರ್ಚೆಯಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿದರೆ, 109 ಗಣಿಗಾರಿಕೆಗೆ ಏನು ಅನುಮತಿ ಕೊಟ್ಟಿರತಕ್ಕ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಆ 109 ಜನರಿಗೆ ಅನುಮತಿ ಕೊಟ್ಟಿರುವ ವಿಚಾರದಲ್ಲಿ ಅವರು ಯಾವ ತನಿಖೆಯನ್ನು ಬೇಕಾದರೂ ಮಾಡಿಕೊಳ್ಳಲಿ.

ಹೊಸದಾಗಿ ಲೋಕಾಯುಕ್ತಕ್ಕೆ ಅವರು 2008ನೇ ಇಸವಿಯವರೆಗೆ ನಡೆದಿರತಕ್ಕದ್ದನ್ನೆಲ್ಲ ತನಿಖೆ ಮಾಡಿ ಎಂದು ಅವರೇ ಪತ್ರವನ್ನು ಬರೆದಿದ್ದಾರೆ. ಈಗ ಈ 109 ಜನರಿಗೇನು ಗಣಿಗಾರಿಕೆಗೆ ಅನಮತಿ ಕೊಟ್ಟಿರುವ ವಿಚಾರದಲ್ಲಿ ಲೋಕಾಯುಕ್ತದವರಿಗೆ ಫೈಲನ್ನು ಕೊಟ್ಟಿದ್ದಾರೆ..ಆ 109 ಜನರು ಯಾರ್ಯಾರಿಗೆ ಕೊಟ್ಟಿದ್ದಾರೆ, ಯಾರು ಯಾರ ಬಂಧು ಬಳಗದವರು ಅದರ ಬಗ್ಗೆ ನನ್ನ ಅಭ್ಯಂತರವಲ್ಲ. ಆದರೆ, ನನ್ನ ಅಧಿಕಾರದ ಅವಧಿಯಲ್ಲಿ ಕೊಟ್ಟಿರುವ 44 ಪ್ರಕರಣಗಳ ಬಗ್ಗೆ ಸಹ ತನಿಖೆ ಮಾಡಿ, ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇವತ್ತು ಲೋಕಾಯುಕ್ತದವರು ಕೊಟ್ಟಿರುವ ವರದಿಯ ಆಧಾರದ ಮೇಲೆ ಬಳ್ಳಾರಿಯಲ್ಲಿ ಏನು ಅಕ್ರಮವಾಗಿ ಅನಧಿಕೃತವಾಗಿ ಗಣಿಗಾರಿಕೆ ನಡೆದಿದೆ ಅದರ ಬಗ್ಗೆ ಏನು ವರದಿ ಕೊಟ್ಟಿದ್ದಾರೆ ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆ ಎಂಬ ಬಗ್ಗೆ ಇದುವರೆಗೆ ಹೇಳುವುದಕ್ಕೆ ಅವರು ತಯಾರಿಲ್ಲ. ಗಣಿಗಾರಿಕೆಯಲ್ಲಿ ಒತ್ತುವರಿಯಾಗಿರುವ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಜಂಟಿ ಸರ್ವೆ ಮಾಡಿಸುತ್ತಿದ್ದೇವೆಂದು ಹೇಳಿದರು. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಅದರಲ್ಲಿ ಮಂತ್ರಿಗಳು ಶಾಮೀಲಾಗಿದ್ದಾರೆ ಎನ್ನುವ ವಿಚಾರವೇನಿದೆ ಆದ್ದರಿಂದ ಅವರು ರಾಜೀನಾಮೆ ಕೊಟ್ಟು ಸಿ.ಬಿ.ಐ. ತನಿಖೆಗೆ ಇದನ್ನು ವಹಿಸಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರೇನು ಬೇಡಿಕೆ ಇಟ್ಟಿದ್ದಾರೆ ಅದಕ್ಕೆ ತಾವು ಉತ್ತರ ಕೊಡಬೇಕಾಗುತ್ತದೆ.

ಡಾ॥ ಬಿ.ಎಸ್.ಯಡಿಯೂರಪ್ಪ :- ನಾವು ಯಾರೂ ಕಣ್ಣಿದ್ದು ಕುರುಡರಂತೆ, ಕಿವಿ ಇದ್ದರೂ ಕಿವುಡರಂತೆ ವರ್ತಿಸುವುದು ಬೇಡ. ಲೋಕಾಯುಕ್ತದವರೇನು ಮೇಲುನೋಟಕ್ಕೆ ಇಲ್ಲಿ ಒತ್ತುವರಿಯಾಗಿದೆ ಅದನ್ನು ಜಂಟಿ ಸರ್ವೆ ಮಾಡಿಸಬೇಕು, ಆದ್ದರಿಂದ ಕೇಂದ್ರದ ಮಧ್ಯಸ್ಥಿಕೆ ವಹಿಸಿ ಜಂಟಿ ಸರ್ವೆ ಮಾಡಿಯೆಂದು ಹೇಳಿದ್ದಾರೆ. ಕೇಂದ್ರದಲ್ಲೇನು ಬಿ.ಜೆ.ಪಿ. ಸರ್ಕಾರ ಇಲ್ಲ. ಅಲ್ಲಿ ನಿಮ್ಮದೇ ಸರ್ಕಾರ ಇದೆ. 24 ಗಂಟೆಯೊಳಗೆ ಆ ಸರ್ವೆಯಾಗಲಿ. ಅದಕ್ಕೆ ನಾನು ತಯಾರಿದ್ದೇವೆ. ನೀವು ಇದಕ್ಕೆ ಏಕೆ ಹಿಂದುಮುಂದು ನೋಡುತ್ತೀರಿ? ಆಂಧ್ರ ಮತ್ತು ಕೇಂದ್ರದಲ್ಲಿ ನಿಮ್ಮದೇ ಸರ್ಕಾರವಿದೆ.

ಶ್ರೀ ಕುಮಾರಸ್ವಾಮಿ :- ಆಂಧ್ರದಲ್ಲಿ ಯಾರ ಜೊತೆ ಚೆನ್ನಾಗಿದ್ದಾರೆ. ಓಬಳಾಪುರಂ ಮೈನಿಂಗ್‌ನಲ್ಲಿ ಆಂಧ್ರಪ್ರದೇಶದ ಪಾಲುದಾರರು ಯಾರಿದ್ದಾರೆ?

ಶ್ರೀ ಜಿ.ಕರುಣಾಕರರೆಡ್ಡಿ: ನಾಚಿಕೆಯಾಗಬೇಕು. ಬೆಳಿಗ್ಗೆಯೇ ಸುಮ್ಮನೆ ಸುಳ್ಳು ಹೇಳತಕ್ಕದ್ದು.

ಅಧ್ಯಕ್ಷರು :- ಈಗ ವಿಧಾನ ಪರಿಷತ್ತಿನ ಸಭಾನಾಯಕರನ್ನು request ಮಾಡಿಕೊಂಡು ಇಂದು 11 ಗಂಟೆಗೆ ಇಲ್ಲಿ ಮುಖ್ಯಮಂತ್ರಿಯವರು, ವಿರೋಧ ಪಕ್ಷದ ನಾಯಕರು, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಕರೆದು ಜಂಟಿ ಕಾರ್ಯಕಲಾಪಗಳ ಸಭೆಯನ್ನು ಮಾಡಿ ಈ ವಿಚಾರದ ಬಗ್ಗೆ ಸಮಾಲೋಚನೆ ಮಾಡಿ ಪರಿಹಾರವನ್ನು ಕಂಡುಹಿಡಿದು ಬರುತ್ತೇವೆ. ಅದಕ್ಕಾಗಿ ಈಗ ಸದನವನ್ನು 15 ನಿಮಿಷ ಗಳ ಕಾಲ ಮುಂದೂಡುತ್ತಿದ್ದೇನೆ.

(ಸಭೆಯನ್ನು 15 ನಿಮಿಷಗಳ ಕಾಲ ಮುಂದೂಡಲಾಯಿತು)

(ಸದನವು ಪುನ: 12 ಗಂಟೆ 48 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಸದನದ ಬಾವಿಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಧರಣಿಯಲ್ಲಿ ನಿರತರಾಗಿದ್ದರು)

(ಮಾನ್ಯ ಬಿಜೆಪಿ ಸದಸ್ಯರಾದ ಶ್ರೀ ಶ್ರೀಕಾಂತ ಕುಲಕರ್ಣಿಯವರು, ಶ್ರೀ ಸಿದ್ದು ಸವದಿಯವರು, ಶ್ರೀ ಅಭಯ ಪಾಟೀಲ್‌ರವರು, ಮುಂತಾದ ಬಿಜೆಪಿ ಸದಸ್ಯರು ಸದನದ ಬಾವಿಯ ಹತ್ತಿರ ಬಂದು "ಉತ್ತರ ಕರ್ನಾಟಕದ ವಿಷಯಗಳಿಗೆ ಆದ್ಯತೆ ನೀಡಿ" ಎನ್ನುವ ಬ್ಯಾನರ್ ಪ್ರದರ್ಶಿಸುತ್ತಾ ಘೋಷಣೆಗಳನ್ನು ಕೂಗುತ್ತಿದ್ದರು)

ಅಧ್ಯಕ್ಷರು :- ಮಾನ್ಯ ಶ್ರೀಕಾಂತ ಕುಲಕರ್ಣಿಯವರೇ ದಯಮಾಡಿ ನೀವು ನಿಮ್ಮ ಸ್ಥಾನಕ್ಕೆ ಹೋಗಿ. ನಾವು ಈಗಾಗಲೇ ಚರ್ಚಿಸಿದ್ದೇವೆ. ನಿಮ್ಮೆಲ್ಲರಿಗೂ ಅವಕಾಶ ಕೊಡುತ್ತೇವೆ. ದಯಮಾಡಿ ನೀವು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಚರ್ಚೆಗೆ ಅವಕಾಶ ಕೊಡುತ್ತೇನೆ, ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ. ಶ್ರೀಕಾಂತ ಕುಲಕರ್ಣಿಯವರೆ, ಬೆಳ್ಳುಬ್ಬಿಯವರೆ, ನೀವು ಆಡಳಿತ ಪಕ್ಷದಲ್ಲಿದ್ದೀರಿ. ದಯವಿಟ್ಟು ನಿಮ್ಮ ನಿಮ್ಮ ಆಸನಗಳಿಗೆ ಹೋಗಿ. ಚರ್ಚೆ ಪ್ರಾರಂಭ ಮಾಡೋಣ. ನಿಮ್ಮ ನಿಮ್ಮ ಸ್ಥಾನಕ್ಕೆ ಹೋಗಿ. ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ. ನಂತರ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಹೀಗಾಗಿ ದಯವಿಟ್ಟು ನಿಮ್ಮ ನಿಮ್ಮ ಆಸನಗಳಿಗೆ ಹೋಗಿ.

(ಈ ಹಂತದಲ್ಲಿ ಬಿಜೆಪಿ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು)

ಅಧ್ಯಕ್ಷರು :- ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ಎಲ್ಲ ನಾಯಕರುಗಳನ್ನು ಕರೆದು ಮಾತನಾಡಿದ್ದೇನೆ. ಇವತ್ತಿನದಿವಸ ಸದನದಲ್ಲಿ ಚರ್ಚೆಯಾಗುವುದಕ್ಕೆ ಸಾಕಷ್ಟು ವಿಷಯಗಳು ಇದ್ದು, ಬಾಕಿ ಉಳಿದಿರುವ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಗಮನಸೆಳೆಯುವ ಸೂಚನೆ ಮತ್ತು ನಿಯಮ 69ರ ಮೇಲೆ ಚರ್ಚೆ ಮಾಡುವ ವಿಷಯಗಳು, ನೀರಾವರಿ ಯೋಜನೆ ಮತ್ತು ಇನ್ನು ಹಲವಾರು ವಿಷಯಗಳ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ಸದಸ್ಯರುಗಳು ಮಾತನಾಡುವುದಕ್ಕೆ ಆಸಕ್ತಿ ತೋರಿಸಿದ್ದಾರೆ. ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಕೊಡುತ್ತೇನೆ. ಆದ್ದರಿಂದ, ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ದಯವಿಟ್ಟು ಹೋಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಬಹುಶ: ಗಣಿ ಹಗರಣದ ಬಗ್ಗೆ ನಾವುಗಳು ಚರ್ಚೆ ಮಾಡಿರತಕ್ಕಂಥದ್ದಕ್ಕೆ ಸರ್ಕಾರದ ಕಡೆಯಿಂದ ಸಮಂಜಸವಾದಂಥ ಉತ್ತರ ಬರಲಿಲ್ಲ. ಇದರ ಬಗ್ಗೆ ಸಿಬಿಐ ತನಿಖೆ ಮಾಡಬೇಕೆಂದು ನಾವು ಕೇಳಿದ್ದೆವು. ಆದರೆ, ಅದರ ಬಗ್ಗೆ ಅವರೇನು ಹೇಳಲಿಲ್ಲ. ಮತ್ತೆ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ನಾವು ಕೇಳಿದ್ದೆವು, ಅದಕ್ಕೂ ಕೂಡ ಅವರು ಒಪ್ಪಲಿಲ್ಲ. ಈ ವಿಷಯ ಬಹಳ ಗಹನವಾಗಿದ್ದು ರಾಜ್ಯದ ಬೊಕ್ಕಸಕ್ಕೆ ಇದರಿಂದ ಕೊರತೆಯಾಗುತ್ತಿದೆ. ಆದ್ದರಿಂದ, ಇದನ್ನು ಗಂಭೀರವಾಗಿ ತೆಗೆದುಕೊಂಡು ಸಿಬಿಐಗೆ ತಾವು ಒಪ್ಪಿಸ ಬೇಕೆಂದು ಹೇಳಿದ್ದೇವೆ. ಗಡಿ ಭಾಗದಲ್ಲಿ ಮೈನಿಂಗ್ ನಡೆಯತಕ್ಕಂಥದ್ದು ಒಂದೇ ಅಲ್ಲದೆ ನಮ್ಮ ರಾಜ್ಯದ 32 ಕಿ.ಮೀ. ಉದ್ದ ಮತ್ತು 1 ಕಿ.ಮೀ. ಅಗಲ ಜಾಗವನ್ನು ಆಂಧ್ರ ಪ್ರದೇಶದವರು ವಿಸ್ತರಣೆ ಮಾಡಿಕೊಂಡು ಗಣಿಗಾರಿಕೆಗೆ ಅವಕಾಶ ಮಾಡಿಕೊಡುತ್ತಿದ್ದಾರೆ. ಈ illegal mining ಅನ್ನು ನಿಲ್ಲಿಸುವುದಕ್ಕೆ ಕೇಳಿಕೊಂಡೆವು, ಅದಕ್ಕೂ ಕೂಡ ಇವರು ಪ್ರತಿಕ್ರಿಯಿಸಲಿಲ್ಲ. ಆದರೆ, ತಾವು ಮತ್ತು ಮೇಲ್ಮನೆ ಸಭಾತಿಗಳು ಸೇರಿ ಎಲ್ಲಾ ವಿರೋಧಪಕ್ಷದ ಮುಖಂಡರು ಮತ್ತು ಫ್ಲೋರ್ ಲೀಡರ್‌ಗಳನ್ನು ಕರೆಸಿ ಮಾತನಾಡಿದ್ದೀರಿ. ತಾವು ನಮ್ಮ ಜೊತೆ ಮಾತನಾಡಿರುವ ಪ್ರಕಾರ ವಿಶೇಷವಾಗಿ ಈ ಭಾಗದ ಸಮಸ್ಯೆಗಳನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಮತ್ತು ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಎಲ್ಲ ಸದಸ್ಯರು ಬೆಳಕು ಚೆಲ್ಲಬೇಕೆಂದು ಮತ್ತು ನೀರಾವರಿ, ರಸ್ತೆ, ರೇಷನ್‌ಕಾರ್ಡ್‌ನ ಸಮಸ್ಯೆಗಳಿರಬಹುದು, ಇನ್ನೂ ಅನೇಕ ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿವೆ.

ಮತ್ತೆ ನಂಜುಂಡಪ್ಪ ವರದಿ ಬಗ್ಗೆ ಕೂಡ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ, ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ಸದಸ್ಯರೆಲ್ಲರೂ ಸೇರಿ ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಈಗ ನಾವುಗಳು ಪ್ರಸ್ತಾಪ ಮಾಡಿರುವಂಥ ಪ್ರಶ್ನೆಯನ್ನು ಇಲ್ಲಿಗೆ ಕೈಬಿಡುವುದಿಲ್ಲ. ಪುನ: ಫೆಬ್ರವರಿಯಲ್ಲಿ ಸೇರುವಂಥ ಅಧಿವೇಶನದಲ್ಲಿ ಈ ಸಮಸ್ಯೆಯನ್ನು ಪ್ರಸ್ತಾಪ ಮಾಡಿ ಇದಕ್ಕೆ ಪರಿಹಾರವನ್ನು ತಮ್ಮ ಮುಖಾಂತರವೇ ಮಾಡಿಕೊಳ್ಳುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಈ ಸಮಸ್ಯೆಯನ್ನು ಇಲ್ಲಿಗೆ ಸ್ಥಗಿತಗೊಳಿಸಿ ಮುಂದೆ ಎಲ್ಲಾ ವಿಷಯಗಳ ಮೇಲೆ ಬೆಳಕು ಚೆಲ್ಲುವುದಕ್ಕೆ ಸದಸ್ಯರುಗಳಿಗೆ ಅವಕಾಶ ಮಾಡಿಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಈ ಭಾಗದ ಬಗ್ಗೆ ಬಹಳ ಕಾಳಜಿ ಇರುವುದನ್ನು ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕಿಂಥ ಮುಂಚೆ ಕೆಲವು ವಿಷಯಗಳನ್ನು ಪತ್ರಿಕೆಗಳಲ್ಲಿ ಬಿಡುಗಡೆ ಮಾಡಿದ್ದಾರೆ. ಇದರ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಸಂದರ್ಭ ಬಂದಾಗ ಹೇಳುತ್ತೇನೆ. ಇದು ಏನೇ ಇದ್ದರೂ ಕೂಡ ಎರಡು ವರ್ಷಗಳ ಹಿಂದೆ ಏನು ಆಶ್ವಾಸನೆಗಳನ್ನು ಕೊಟ್ಟಿದ್ದರೋ ಅವೆಲ್ಲ ಕೂಡ ಅಲ್ಲಿಗೆ ನಿಂತುಹೋಗಿವೆ. ಅದರ ಬಗ್ಗೆ ಇಲ್ಲಿ ಪುನ: ಪ್ರಸ್ತಾಪಮಾಡತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ ನಮ್ಮ ಧರಣಿಯನ್ನು ಸ್ಥಗಿತಗೊಳಿಸಿ ಮುಂದೆ ಚರ್ಚೆಗೆ ಅವಕಾಶ ಆಗಲೆಂಬ ಸದುದ್ದೇಶದಿಂದ ಮತ್ತು ನಿಮ್ಮ ಆಜ್ಞೆಯ ಮೇರೆಗೆ ಹಾಗೂ ತಾವು ಮತ್ತು ಮೇಲ್ಮನೆಯ ಸಭಾಪತಿಗಳು ಸೇರಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಯತ್ನ ಮಾಡಿ ನಮಗೆ ಮನವೊಲಿಸತಕ್ಕಂಥ ಕೆಲಸವನ್ನು ಮಾಡಿದ್ದೀರಿ. ಆದ್ದರಿಂದ, ತಮ್ಮ ಮಾತಿಗೆ ಬೆಲೆಕೊಟ್ಟು ತಾವು ಹೇಳಿದನ್ನು ಒಪ್ಪಿಕೊಂಡು ಈ ಸದನ ಸರಿಯಾದ ರೀತಿಯಲ್ಲಿ ನಡೆಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ಧರಣಿಯನ್ನು ಸಧ್ಯಕ್ಕೆ ಸ್ಥಗಿತಗೊಳಿಸುತ್ತೇವೆ. ನಮ್ಮ ಸದಸ್ಯರೆಲ್ಲರೂ ಧರಣಿಯಿಂದ ಹಿಂದಕ್ಕೆ ಬರಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನ ಬಾವಿಯಿಂದ ತಮ್ಮಗಳ ಸ್ಥಾನಕ್ಕೆ ತೆರಳಿದರು)

ಡಾ॥ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ತಾವೂ ಮತ್ತು ಮಾನ್ಯ ಸಭಾಪತಿಗಳು ಸೇರಿ ಪ್ರತಿಪಕ್ಷದ ನಾಯಕರು ಮತ್ತು ಆಡಳಿತ ಪಕ್ಷದ ನಾಯಕರನ್ನು ಕರೆಸಿ ತಿಳಿಯಾದ ವಾತಾವರಣವನ್ನು ಮೂಡಿಸಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕೆ ಪ್ರತಿಪಕ್ಷದ ನಾಯಕರು ಸಹಕರಿಸಿದ್ದಕ್ಕಾಗಿ

ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಸಮಗ್ರ ಅಭಿವೃದ್ಧಿ ಮತ್ತು ಮುಂದೆ ಆಗಬೇಕಾಗಿರುವ ಕೆಲವು ಕಾರ್ಯಕ್ರಮಗಳ ಬಗ್ಗೆ ವ್ಯಾಪಕ ಚರ್ಚೆ ಮಾಡಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ. ನೆನ್ನೆ ದಿವಸ ಮಂತ್ರಿಮಂಡಲ ಸಭೆಯಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿತ್ತು. ಇವತ್ತು ಸದನದ ಒಳಗಡೆ ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಆ ವಿಷಯಗಳನ್ನು ಹೇಳಬೇಕೆಂದು ಇದ್ದೆವು. ಆದರೆ, ನಮಗೆ ಗೊತ್ತಿಲ್ಲದೆ ಮಾಧ್ಯಮಗಳ ಕೈಗೆ ನಾವು ತೆಗೆದುಕೊಂಡಿರುವ ನಿರ್ಧಾರಗಳ ಪ್ರತಿಗಳು ಸಿಕ್ಕಿ ಕೆಲವು ಪತ್ರಿಕೆಗಳಲ್ಲಿ ಅದು ಪ್ರಕಟವಾಗಿದೆ. ಇದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ನಾವು ಅತ್ಯಂತ ಪ್ರಾಮಾಣಿಕವಾಗಿ ಸದನದ ಕಾರ್ಯಕಲಾಪಗಳು ನಡೆಯುವಂಥ ಸಂದರ್ಭದಲ್ಲಿ ಹೇಳುತ್ತೇನೆಂದು ನೆನ್ನೆ ದಿವಸ ಮಂತ್ರಿ ಮಂಡಲ ಸಭೆ ಆದ ನಂತರ ಹೇಳಿದ್ದೆ. ಸದನದ ಒಳಗಡೆ ಪ್ರಸ್ತಾಪ ಮಾಡತಕ್ಕಂಥದ್ದು ನಮ್ಮ ಸತ್ಸಂಪ್ರದಾಯ. ಆದ್ದರಿಂದ, ಯಾವುದೇ ಕಾರಣಕ್ಕೂ ಹೊರಗಡೆ ಪ್ರಕಟ ಮಾಡುವುದಿಲ್ಲವೆಂದು ಒಂದು ಶಬ್ಧ ಮಾತನಾಡದೇ ನಾನು ಬಂದಿದ್ದೆ. ಸಚಿವ ಸಂಪುಟ ಸಭೆಯಾದ ಮೇಲೇ ಯಾವುದೇ ವಿಚಾರವನ್ನು ಮಾಧ್ಯಮ ಸ್ನೇಹಿತರಿಗೆ ತಿಳಿಸತಕ್ಕಂಥ ಪ್ರಯತ್ನವನ್ನು ನಾನು ಮಾಡಿರಲಿಲ್ಲ. ಆದ್ದರಿಂದ, ಪ್ರತಿಪಕ್ಷದ ನಾಯಕರುಗಳಲ್ಲಿ ಮತ್ತು ಈ ಮನೆಯಲ್ಲಿ ವಾಸ್ತವಿಕ ಸಂಗತಿಯನ್ನು ಮನವೊರಿಕೆ ಮಾಡುವು ಪ್ರಯತ್ನ ಮಾಡಿದ್ದೇನಷ್ಟೆ. ಪ್ರತಿಪಕ್ಷದ ನಾಯಕರು ಇಡೀ ಪ್ರಕರಣವನ್ನು ಸಿಬಿಐಗೆ ವಹಿಸಿ ಗಡಿ ಪ್ರದೇಶದಲ್ಲಿ ಗಣಿಗಾರಿಯನ್ನು ನಿಲ್ಲಿಸಬೇಕೆಂದು ಕೋರಿದ್ದರು. ಸಿಬಿಐ ದೇಶದ ಉನ್ನತ ತನಿಖಾ ಸಂಸ್ಥೆ ಮತ್ತು prosecuting agency ಆಗಿದೆ. ಈ ಒಂದು ಉದ್ದೇಶದಿಂದ ಸಿಬಿಐನಿಂದ ತನಿಖೆಯಾಗುವುದಿಲ್ಲವೆಂಬುದು ನಮ್ಮ ಭಾವನೆ. ಮತ್ತೆ ಈಗಾಗಲೇ ಇದರ ಬಗ್ಗೆ ಲೋಕಾಯುಕ್ತರಿಗೆ ತನಿಖೆ ಮಾಡುವುದಕ್ಕೆ ಕೊಟ್ಟಾಗ ಇನೊಬ್ಬರು ತನಿಖೆ ಮಾಡುವಂಥ ಅಗತ್ಯ ಇಲ್ಲವೆಂಬ ದೃಷ್ಟಿಯಿಂದ ಈ ಮನೆಯಲ್ಲಿ ಪ್ರತಿಪಕ್ಷದ ನಾಯಕರ ಮನವೊಲಿಸುವಂಥ ಪ್ರಯತ್ನ ಮಾಡಿದ್ದೇನೆ. ಮತ್ತೆ ಇದರ ಬದಲಿಗೆ ಇಡೀ ಗಡಿ ಪ್ರದೇಶದ ಸರ್ವೆ ಮಾಡಿ ಏರಿಯಾವನ್ನು ಗುರುತಿಸುವುದಕ್ಕೋಸ್ಕರ ಭಾರತ ಸರ್ಕಾರದ ನೇತೃತ್ವದಲ್ಲಿ ಅವರ ಸೂಚನೆಯಂತೆ ಮತ್ತು ಅವರ ಮಾರ್ಗದರ್ಶನದಂತೆ ಜಂಟಿ ಸರ್ವೆ ಯಾದಾಗ ಅದರಿಂದ ನಮಗೆ ನ್ಯಾಯ ಸಿಗುತ್ತದೆಂಬ ಉದ್ದೇಶದಿಂದ ಭಾರತ ಸರ್ಕಾರಕ್ಕೆ ಈ ಮನೆಯ ಮೂಲಕವಾಗಿ ಒತ್ತಾಯ ಮಾಡುತ್ತೇನೆ. ಮತ್ತೆ ನಾಳೆ

ದಿವಸ ಮಾನ್ಯ ಪ್ರಧಾನಿಯವರಿಗೆ ಪತ್ರ ಕೂಡ ಬರೆಯುತ್ತೇನೆ. ಆದಷ್ಟು ಬೇಗ ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಿಂದ ತ್ವರಿತಗತಿಯಲ್ಲಿ ಜಂಟಿ ಸರ್ವೆಯನ್ನು ಮಾಡಬೇಕೆಂದು ಪತ್ರ ಬರೆದು ವಿನಂತಿ ಕೂಡ ಮಾಡುತ್ತೇನೆ. ನಾವೆಲ್ಲಾ ಹೋಗಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಅವರ ಮಧ್ಯಸ್ಥಿಕೆಯಲ್ಲಿ ಆದಷ್ಟು ಬೇಗ ಜಂಟಿ ಸರ್ವೆ ಮಾಡಿಸೋಣವೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೆ. ಮತ್ತೆ ಜಂಟಿ ಸದನ ಸಮಿತಿ ಮಾಡೋಣವೆಂದು ಸರ್ಕಾರ ಒಪ್ಪಿಕೊಂಡಿತು. ಆದರೆ, ಇದಕ್ಕೂ ಕೂಡ ಅವರು ಒಪ್ಪಲಿಲ್ಲ. ಮತ್ತೆ ಪ್ರಧಾನಿಯವರನ್ನು ಭೇಟಿ ಮಾಡುವುದಕ್ಕೆ ಅವರು ಒಪ್ಪುತ್ತಿಲ್ಲ. ಅದ್ದರಿಂದ, ನಾನೇ ಒಂದು ಪತ್ರ ಬರೆದು ಜಂಟಿ ಸರ್ವೆ ಮಾಡುವುದಕ್ಕೆ ನನ್ನ ಕೈಯಿಂದಾಗುವ ಎಲ್ಲಾ ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಭರವಸೆ ಕೊಡುತ್ತಾ ಮತ್ತೊಮ್ಮೆ ಪ್ರತಿಪಕ್ಷದ ನಾಯಕರು ಸಹಕರಿಸಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸರ್ಕಾರದ ಪರವಾಗಿ ಸಲ್ಲಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ಮುಖ್ಯಿ ಮಂತ್ರಿಗಳು ಮತ್ತು ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇನ್ನಿತರ ನಾಯಕರುಗಳನ್ನು ನಾನು ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳಾದಂಥ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಕರೆದು ಚರ್ಚೆ ಮಾಡಿ ಇವತ್ತು ಸದನದಲ್ಲಿ ಎಲ್ಲಾ proceedings stall ಆಗಿದೆ. ಆದ್ದರಿಂದ, ಸ್ಟಾಲ್ ಆಗಿರುವಂಥ proceedingsಗೆ ಒಂದು ಅಂತ್ಯವನ್ನು ಹೇಳೋಣ. ಇನ್ನು ಸಾಕಷ್ಟು ವಿಷಯಗಳು ಚರ್ಚೆ ಮಾಡಬೇಕಾಗಿರುವುದರಿಂದ ನೀವುಗಳು ಸಹಕಾರ ಕೊಡಬೇಕೆಂದು ನಾವಿಬ್ಬರೂ ವಿನಂತಿ ಮಾಡಿದಾಗ ಅದಕ್ಕೆ ಎಲ್ಲರೂ ಸ್ಪಂದನೆ ಮಾಡಿ ಇವತ್ತು ಉಳಿದ ಎಲ್ಲಾ ವಿಷಯಗಳು ಚರ್ಚೆಯಾಗಲೆಂಬ ಸದುದ್ದೇಶ ಇಟ್ಟುಕೊಂಡು ವಿರೋಧಪಕ್ಷದ ನಾಯಕರು ಮತ್ತು ಇನ್ನಿತರ ಎಲ್ಲಾ ಸದಸ್ಯರು ಈ ಒಂದು ಧರಣಿಯನ್ನು ಅಂತ್ಯಗೊಳಿಸಿ ತಮ್ಮ ಸ್ಥಾನಕ್ಕೆ ಹೋಗಿ ಈ proceedings ಅನ್ನು ನಡೆಸಿಲಿಕ್ಕೆ ತಾವುಗಳು ಅವಕಾಶ ಕೊಟ್ಟಿದ್ದೀರಿ. ನಿಮ್ಮಗಳ ಸಹಕಾರಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈಗ ನಮ್ಮ proceedings ಅನ್ನು ಪ್ರಾರಂಭ ಮಾಡೋಣ.

ಎಲ್ಲಾ ಮಾನ್ಯ ಸದಸ್ಯರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಿಯಮ 69ರ ಮೇಲೆ ನೀರಾವರಿ ಮತ್ತು ಲೋಕೋಪಯೋಗಿಯ ಒಂದೆರಡು ವಿಷಯಗಳು ಇವೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇದೆ. ಆಮೇಲೆ ಗಮನ ಸೆಳೆಯುವ ಸೂಚನೆಗಳು ಇವೆ. ಎಲ್ಲ ವಿಷಯಗಳನ್ನು ನಾವು ತೆಗೆದುಕೊಳ್ಳೋಣ. ಅದಕ್ಕೆ ನಮ್ಮ ಶಾಸಕರು ಅದರಲ್ಲಿ participate ಮಾಡುತ್ತಾರೆ.

Upto the point ಏನು ಹೇಳಬೇಕು ಎನ್ನುವಂಥದ್ದನ್ನು ನೇರವಾಗಿ ಆ ವಿಷಯಕ್ಕೆ ಪ್ರಸ್ತಾಪವನ್ನು ಮಾಡಿದರೆ ಎಲ್ಲರಿಗೂ ಅವಕಾಶ ಸಿಗಲಿಕ್ಕೆ ಸಾಧ್ಯವಿದೆ. ಕೆಲವರು ನಿಯಮ 69ರ ಮೇಲೆ participate ಮಾಡಿದವರು ಮತ್ತು ಬೇರೆ ಬೇರೆ ಸದಸ್ಯರಿಗೆ ಬೇರೆ ಬೇರೆ ವಿಷಯಗಳಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡೋಣ. ಇವತ್ತು ರಾತ್ರಿ 9 ಗಂಟೆಯಾಗಲಿ ನಾವು ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಆದಷ್ಟು ಇದರಲ್ಲಿ ಹೆಚ್ಚಿನ ಸಂಖ್ಯೆಯ ಶಾಸಕರು participate ಮಾಡಬೇಕು ಎನ್ನುವಂಥ ಆಸೆಯನ್ನು ಕೂಡ ನಾನು ವ್ಯಕ್ತಪಡಿಸುತ್ತೇನೆ. ಅದಕ್ಕಾಗಿ ಎಲ್ಲರಿಗೂ ಅವಕಾಶವನ್ನು ಕಲ್ಪಿಸಿ ಕೊಡುತ್ತೇನೆ. ಎಲ್ಲರೂ ಸಹಕಾರ ಕೊಡಬೇಕು ಎನ್ನುವಂಥದ್ದನ್ನು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಂಡು ಮುಂದಿನ ಕಾರ್ಯಕಲಾವನ್ನು ಪ್ರಾರಂಭ ಮಾಡೋಣ. ಮಾನ್ಯ ಕೆ. ಕರುಣಾಕರ ರೆಡ್ಡಿಯವರೆ ನಿಮಗೆ ಆ ಮೇಲೆ ಅವಕಾಶವನ್ನು ಕೊಡುತ್ತೇನೆ. ಮೊದಲು ಒಂದೆರಡು statement ಗಳು ಇವೆ, ಅವುಗಳು ಮುಗಿದ ನಂತರ ಕೊಡುತ್ತೇನೆ.

2. ಸಭೆಯ ಮುಂದಿಡಲಾದ ಕಾಗದಪತ್ರಗಳು

2008-09 ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯಕಾಲೀನ ಪರಿಶೀಲನಾ ವರದಿ :

ಡಾ॥ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 2008-09ನೆ ಸಾಲಿನ ರಾಜ್ಯ ಹಣಕಾಸಿನ ಮಧ್ಯಕಾಲೀನ ಪರಿಶೀಲನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.